

# ಆತ್ಮಹತ್ಯೆಗಳು ಕಾಡುವುದು ಸತ್ತವರನ್ನಲ್ಲ, ಬದುಕಿರುವವರನ್ನು

ಪಿ.ಸಾಯಿನಾಥ್

(ಸಮಾಜದ ದೃಷ್ಟಿಯಲ್ಲಿ ಕಮಲಾಬಾಯಿ ವಿಧವೆ. ಆದರೆ ಅವಳ ಮಟ್ಟಿಗೆ, ಬದುಕಿಗಾಗಿ ಸೆಣಸುತ್ತಿರುವ ಹಾಗೂ ಕುಟುಂಬಕ್ಕೆ ಆಸರೆಯಾಗಿರುವ ಒಬ್ಬ ಸಣ್ಣ ರೈತ ಮಹಿಳೆ. ತೊಂಬತ್ತರ ದಶಕದ ಮಧ್ಯಭಾಗದಿಂದೀಚೆಗೆ ಕೃಷಿ ಬಿಕ್ಕಟ್ಟಿನಿಂದಾಗಿ ಆತ್ಮಹತ್ಯೆಗೆ ಒಳಗಾಗಿ ತಮ್ಮ ಗಂಡಂದಿರನ್ನು ಕಳೆದುಕೊಂಡ ಒಂದು ಲಕ್ಷ ಮಹಿಳೆಯರಲ್ಲಿ ಈಕೆಯೂ ಒಬ್ಬಳು. ಈಕೆಯ ಬಡತನದ ಬವಣೆಯನ್ನು ಚಿತ್ರಿಸಿರುವ ಲೇಖಕರು ಭಾರತದ ಪ್ರತಿಭಾನ್ವಿತ ಮತ್ತು ಅತ್ಯಂತ ಸಂವೇದನಾಶೀಲ ಪತ್ರಕರ್ತರು. ದೂರದ ಗ್ರಾಮೀಣ ಪ್ರದೇಶಗಳಲ್ಲಿನ ಪ್ರತ್ಯಕ್ಷ ಅನುಭವದಿಂದ ಒಡಮೂಡುವ ಇವರ ಲೇಖನಗಳು ಸರಳವಾಗಿ ಕಂಡರೂ ಕರಾಳ ಸತ್ಯವನ್ನು ಮುಚ್ಚಿಟ್ಟುಕೊಂಡಿರುವಂಥವು; ಗಂಭೀರವಾದ ಚಿಂತನೆಗೆ ಹಚ್ಚುವಂಥವು. ಮೂಲ ಆಂಗ್ಲ ಲೇಖನ ಪ್ರಕಟವಾದ ದಿನಾಂಕ: ೨೧ ಮೇ ೨೦೦೭. ಆಧಾರ: "ಬಿತ್ತಿದ್ದೀರಿ, ಅದಕ್ಕೆ ಅಳುತ್ತೀರಿ" – ಪಿ.ಸಾಯಿನಾಥರ ಕೆಲವು ಲೇಖನಗಳು. ಅನುವಾದ : ಟಿ.ಎಲ್. ಕೃಷ್ಣೇಗೌಡ)

೬೦ ವರ್ಷ ದಾಟಿರುವ ರೈತಮಹಿಳೆ ಕಮಲಾಬಾಯಿ ಗುಢೆ, ತನಗೆ ಸಾಧ್ಯವಾದಾಗಲೆಲ್ಲಾ ಕೂಲಿಕಾರಳಾಗಿ ದುಡಿಯುತ್ತಾಳೆ. ಆದರೆ ಅದು ಕಾಸಿಗಾಗಿ ಅಲ್ಲ, ಕಾಳಿಗಾಗಿ. ಅವಳಿಗೆ ದಕ್ಕುವುದೆಲ್ಲ ಅಷ್ಟೇ. ಹಾಗಾಗಿ ೨೫ ರೂಪಾಯಿ ಬೆಲೆ ಬಾಳುವ ಜೋಳಕ್ಕಾಗಿ ಕೆಲವೊಮ್ಮೆ ಅವಳು ೧೨ ಗಂಟೆಗಳ ಕಾಲ ದುಡಿಯುತ್ತಾಳೆ. ತನ್ನ ನಾಲ್ಕೂವರೆ ಎಕರೆ ಜಮೀನಿನಲ್ಲಿ ಕಷ್ಟಪಟ್ಟು, ಬಹಳ ಹೊತ್ತು ದುಡಿಯುವುದಲ್ಲದೆ ಆಕೆ ಕೂಲಿ ಕೆಲಸವನ್ನೂ ಮಾಡುತ್ತಾಳೆ. ಅವಳ ಜಮೀನು ಅರಣ್ಯದ ಪಕ್ಕದಲ್ಲಿರುವುದರಿಂದ ಉತ್ತಮ ಬೆಳೆ ಬಂದಾಗಲೆಲ್ಲ ಅದು ಕಾಡುಪ್ರಾಣಿಗಳ ಪಾಲಾಗುತ್ತದೆ. ಅವಳ ಹತ್ತಿ ಮತ್ತು ಸೋಯಾಬೀನ್ ಎಷ್ಟು ಸೊಂಪಾಗಿ ಬೆಳೆಯುತ್ತದೋ, ಕಾಡುಹಂದಿ, ಜಿಂಕೆಗಳನ್ನು ಅಷ್ಟೇ ಹೆಚ್ಚಾಗಿ ಆಕರ್ಷಿಸುತ್ತದೆ. ಈ ಜಮೀನಿಗೆ ತಂತಿಬೇಲಿ ಹಾಕಿಸಬೇಕೆಂದರೆ ಸುಮಾರು ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಷ್ಟೊಂದು ಹಣದ ಬಗ್ಗೆ ಆಕೆ ಕನಸು ಕೂಡ ಕಾಣಲಾರಳು.

೧೯೯೦ರ ಮಧ್ಯಭಾಗದಿಂದೀಚೆಗೆ ಕೃಷಿ ಬಿಕ್ಕಟ್ಟಿನಿಂದಾಗಿ ಆತ್ಮಹತ್ಯೆಗೆ ಒಳಗಾಗಿ ತಮ್ಮ ಗಂಡಂದಿರನ್ನು ಕಳೆದುಕೊಂಡ ಒಂದು ಲಕ್ಷ ಮಹಿಳೆಯರಲ್ಲಿ ಕಮಲಾಬಾಯಿ ಕೂಡ ಒಬ್ಬಳು. ಅತ್ಯಂತ ಆಘಾತಗ್ರಸ್ತ ವಲಯವಾದ ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿಯೇ ಆಕೆಯ ವಾಸಸ್ಥಾನ. ೨೦೦೧ರಿಂದೀಚೆಗೆ ೬೦೦೦ ರೈತರು ಆತ್ಮಹತ್ಯೆ ಮಾಡಿಕೊಂಡ ವಿದರ್ಭ ಪ್ರದೇಶದ ಆರು ಜಿಲ್ಲೆಗಳ ಪೈಕಿ ಒಂದಾದ ವಾರ್ಧಾದಲ್ಲಿ ಆಕೆಯ ಹಳ್ಳಿ ಲೋನ್ಸಾವ್ಲಾ ಬರುತ್ತದೆ. ಸಾಲದಿಂದ ಮುಳುಗಿ ಹೋಗಿದ್ದ ಆಕೆಯ ಗಂಡ ಪಲಸ್‌ರಾಮ್ ಒಂದು ವರ್ಷದ ಹಿಂದೆ ತನ್ನ ಜೀವ ತೆಗೆದುಕೊಂಡ. ಈಗ ಈಕೆ ಹೇಗೋ ಕೃಷಿಯಲ್ಲೇ ಏಗುತ್ತಿದ್ದಾಳೆ. ಈಕೆ ವಾಸಿಸುವ ಮುರುಕಲು ಮನೆಯಲ್ಲಿ ಅರ್ಧ ಸೂರಿಲ್ಲ, ಎರಡು ಗೋಡೆಗಳು ಯಾವಾಗ ಬೇಕಾದರೂ ಕುಸಿದುಬೀಳಬಹುದು. ಈ ಮುರುಕಲು ಮನೆಯೇ ಆ ಸಂಸಾರದ ಐದು ಜನರ ವಾಸಸ್ಥಾನ. ಆಕೆಯ ಮಗ, ಸೊಸೆ, ಇಬ್ಬರು ಮೊಮ್ಮಕ್ಕಳು ಅವಳ ಮನೆಯಲ್ಲಿದ್ದಾರೆ. ಸಮಾಜದ ದೃಷ್ಟಿಯಲ್ಲಿ ಆಕೆ ವಿಧವೆ. ಆದರೆ ಅವಳಮಟ್ಟಿಗೆ, ಆಕೆ ಬದುಕಿಗಾಗಿ ಸೆಣಸುತ್ತಿರುವ ಹಾಗೂ ಕುಟುಂಬಕ್ಕೆ ಆಸರೆಯಾಗಿರುವ ಒಬ್ಬ ಸಣ್ಣ ರೈತ ಮಹಿಳೆ.

ಭೂರಹಿತ ದಲಿತನೊಬ್ಬ ಜಮೀನು ಹೊಂದಿದ್ದಾದರೂ ಹೇಗೆ? ಕಮಲಾಬಾಯಿಯ ಜೀವನದ ಪ್ರತಿಕ್ಷಣವೂ ಒಂದು ಹೋರಾಟವೇ. ದಿನಕ್ಕೆ ೧೦–೧೨ ರೂಪಾಯಿ ಕೂಲಿಗೆ ಕೃಷಿ ಕೂಲಿಕಾರಳಾಗಿ ಜೀವನ ಆರಂಭಿಸಿದ ಆಕೆ, "ಆ ದಿನಗಳಲ್ಲಿ ಅದೇ ಬಹಳವಾಗಿತ್ತು" ಎಂದು ೪೦ ವರ್ಷಗಳ ಹಿಂದಿನ ತನ್ನ ಬದುಕನ್ನು ನೆನಪಿಸಿಕೊಳ್ಳುತ್ತಾಳೆ. ಇದರ ಜೊತೆ ಹಸುಗಳ ಮೇವನ್ನು ಸಂಗ್ರಹಿಸಿ ಮಾರುವುದನ್ನೂ ಆಕೆ ಆ ಕಾಲದಲ್ಲಿ ಆರಂಭಿಸಿದ್ದಳು.

"ನನ್ನ ತಾಯಿ ಮೇವನ್ನು ಸಂಗ್ರಹಿಸಲು ಘಂಟೆಗಟ್ಟಲೆ ಎಷ್ಟು ದೂರ, ಎಷ್ಟೊಂದು ಶ್ರಮಪಟ್ಟು ತಿರುಗಾಡುತ್ತಿದ್ದಳು, ಮಾರನೇ ದಿನ ಪುಡಿಗಾಸಿಗೆ ಅದನ್ನು ಮಾರುತ್ತಿದ್ದಳು ಎಂಬುದು ನನಗೆ ಈಗಲೂ ನೆನಪಿದೆ" ಎನ್ನುತ್ತಾನೆ ಆಕೆಯ ಮಗ ಭಾಸ್ಕರ. ಆತನೇ ಜಮೀನನ್ನು ಹೇಗಾದರೂ ನಡೆಸುವ ಆಕೆಯ ಎಲ್ಲಾ ಯೋಜನೆಗಳ ಕೇಂದ್ರಬಿಂದು. "ಒಂದು ಹಿಡಿ ಮೇವಿಗೆ ಹತ್ತು ಪೈಸೆ ಪಡೆಯುತ್ತಿದ್ದೆ. ಇದಕ್ಕಾಗಿ ನಾನು ಸಾಕಷ್ಟು ಅಲೆಯಬೇಕಾಗಿತ್ತು. ಆದರೂ ಈ ಮೇವಿನಿಂದಲೇ ದಿನಕ್ಕೆ ಹತ್ತು ರೂಪಾಯಿಗಳನ್ನು ಸಂಪಾದಿಸುತ್ತಿದ್ದೆ" ಎಂದು ನಗುತ್ತಾ ಹೇಳುತ್ತಾಳೆ ಕಮಲಾಬಾಯಿ. ಅಂದರೆ ದಿನ ಒಂದಕ್ಕೆ ೧೦೦ ಹಿಡಿ ಮೇವನ್ನು ಸಂಗ್ರಹಿಸಲು ಮತ್ತು ಮಾರಾಟ ಮಾಡಲು ಆಕೆ ಮೈಲುಗಟ್ಟಲೆ ಅಲೆದಾಡಬೇಕಿತ್ತು. ಹಾಗಿದ್ದರೂ ಆಕೆಯ ೧೬–೧೮

ಗಂಟೆಗಳ ದುಡಿಮೆಯ ಆ ದಿನಗಳು ಫಲದಾಯಕವಾಗಿದ್ದವು. ಇಂತಹ ಕಡುಕಷ್ಟದ ಸತತ ದುಡಿಮೆಯಿಂದ ಆಕೆ ಮತ್ತು ಆಕೆಯ ಗಂಡ ಒಂದಿಷ್ಟು ಉಳಿತಾಯ ಮಾಡಿ, ಸುಮಾರು ೪೦ ವರ್ಷಗಳ ಹಿಂದೆ, ಬೇರಾರೂ ಕೊಳ್ಳಲು ಇಷ್ಟಪಡದ ಕಾಡಿನ ಬದಿಯಲ್ಲಿನ ಒಂದು ಜಮೀನನ್ನು ಕೊಂಡುಕೊಂಡರು. ಆಗ ಈ ನಾಲ್ಕೂವರೆ ಎಕರೆ ಭೂಮಿಯ ಬೆಲೆ ೧೭,೦೦೦ ರೂಪಾಯಿ ಆಗಿತ್ತು. ಈ ಅತ್ಯಂತ ದುಷ್ಕರವಾದ ಭೂಮಿಯಲ್ಲಿ ಕೃಷಿ ಮಾಡಲು ಆ ಇಡೀ ಸಂಸಾರವೇ ಒಂದು ರೀತಿಯಲ್ಲಿ ಗುಲಾಮರಂತೆ ಎಣೆಯಿಲ್ಲದೆ ದುಡಿಯಿತು. "ನನಗೆ ಇನ್ನೊಬ್ಬ ಮಗನೂ ಇದ್ದ. ಅವನು ಸತ್ತು ಹೋದ" ಎಂದು ಹಲುಬುತ್ತಾಳೆ ಕಮಲಾಬಾಯಿ.

ತನ್ನ ೬೦ರ ಪ್ರಾಯದಲ್ಲೂ ಕಮಲಾಬಾಯಿ ತುಂಬಾ ದೂರ ನಡೆಯುತ್ತಾಳೆ. "ಏನು ಮಾಡೋದು? ಹೊಲ ನಮ್ಮ ಹಳ್ಳಿಯಿಂದ ಆರು ಕಿಲೋಮೀಟರ್ ದೂರದಲ್ಲಿದೆ. ಕೆಲಸ ಸಿಕ್ಕಿತೆಂದರೆ ನಾನು ಕೂಲಿ ಮಾಡಿಯೂ ದುಡಿಯುತ್ತೇನೆ. ಭಾಸ್ಕರ ಮತ್ತು ವನಿತಾಳಿಗೆ ಸಹಾಯ ಮಾಡಲು ಹೊಲಕ್ಕೂ ಹೋಗುತ್ತೇನೆ" ಎನ್ನುತ್ತಾಳೆ ಕಮಲಾಬಾಯಿ. ಸರ್ಕಾರಿ ಯೋಜನೆಗಳಲ್ಲಿ ಕೆಲಸ ಸಿಗಲು ಬಹಳ ವಯಸ್ಸಾಗಿದೆ ಕಮಲಾಬಾಯಿಗೆ. ಇವೆಲ್ಲದರೊಡನೆ ಒಂಟಿ ಮಹಿಳೆಯರನ್ನು, ಅದರಲ್ಲೂ ವಿಧವೆಯರನ್ನು ಕಂಡರೆ ಸಮಾಜದಲ್ಲಿ ಈಗಲೂ ಸಾಕಷ್ಟು ಪೂರ್ವಗ್ರಹಗಳಿವೆ. ಅವಾವುದನ್ನೂ ಲೆಕ್ಕಿಸದ ಆಕೆ ತನಗೆ ಸಿಕ್ಕಿದ ಕೆಲಸದಲ್ಲಿ ದುಡಿಯುತ್ತಾಳೆ.

ಮನೆಯವರೆಲ್ಲರೂ ಸೇರಿ ಹೊಲವನ್ನು ತುಂಬಾ ಉತ್ತಮ ಪಡಿಸಿದ್ದಾರೆ. ಹೊಲದಲ್ಲಿ ಅವರೇ ನಿರ್ಮಿಸಿರುವ ದೊಡ್ಡ ಬಾವಿಯ ಕಡೆ ಕೈತೋರಿಸಿ, "ಈ ಬಾವಿಯನ್ನು ನೋಡಿ. ಇದನ್ನು ನಾವು ಸ್ವಚ್ಛಗೊಳಿಸಿ, ರಿಪೇರಿ ಮಾಡಿಸಿದರೆ ನಮಗೆ ಇನ್ನೂ ಹೆಚ್ಚು ನೀರು ಸಿಗುತ್ತದೆ" ಎನ್ನುತ್ತಾಳೆ ಕಮಲಾಬಾಯಿ. ಆದರೆ ಅದಕ್ಕೆ ಕನಿಷ್ಠ ೧೫,೦೦೦ ರೂಪಾಯಿ ಬೇಕು. ಇದಲ್ಲದೆ ಜಮೀನಿಗೆ ತಂತಿಬೇಲಿ ನಿರ್ಮಿಸಲು ಒಂದು ಲಕ್ಷ ರೂಪಾಯಿಗಳಾದರೂ ಬೇಕು. ಇಳಿಜಾರಿನಲ್ಲಿರುವ ಒಂದು ಎಕರೆಯನ್ನು ಬೇಕಾದರೆ ನೀರಿನ ಹೊಂಡವಾಗಿ ಬಳಸಿ ಉಪಯೋಗಿಸಬಹುದು. ಅದಕ್ಕೆ ಮತ್ತಷ್ಟು ಹಣ ಬೇಕು. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಸಾಲಗಳು ಇಂಥ ಕಡುಬಡವರಿಗೆ ದೊರಕುವುದು ಸಾಧ್ಯವೇ ಇಲ್ಲ. ಮುರಿದು ಬೀಳುತ್ತಿರುವ ಮನೆಯನ್ನು ರಿಪೇರಿ ಮಾಡಿಸಲು ೨೫,೦೦೦ ರೂಪಾಯಿಗಳು ಬೇಕು. "ಬೆಳೆ ನಷ್ಟದಿಂದಾಗಿ ನಾವು ೧.೫ ಲಕ್ಷ ರೂಪಾಯಿಗಳ ಸಾಲಗಾರರಾದೆವು. ಇದರಿಂದಾಗಿ ನನ್ನ ಗಂಡ ಜೀವ ಕಳೆದುಕೊಂಡ" ಎನ್ನುತ್ತಾಳೆ ಕಮಲಾಬಾಯಿ. ಸರ್ಕಾರದಿಂದ ಸಿಕ್ಕಿದ ಒಂದು ಲಕ್ಷ ರೂಪಾಯಿಗಳ ಪರಿಹಾರದ ಹಣದಲ್ಲಿ ಸ್ವಲ್ಪ ಸಾಲ ತೀರಿಸಿದರು; ಉಳಿದಿದ್ದರಲ್ಲಿ ಸ್ವಲ್ಪ ಮನೆ ಖರ್ಚಿಗಾಯಿತು. ಆದರೆ ಸಾಲಗಾರರು ಈಗಲೂ ಆಕೆಗೆ ತೊಂದರೆ ಕೊಡುತ್ತಿದ್ದಾರೆ. "ನಮ್ಮ ಬದುಕು ಚೆನ್ನಾಗಿಯೇ ನಡೆದಿತ್ತು. ಆದರೆ, ಹಲವಾರು ವರ್ಷಗಳ ಕಾಲ ವ್ಯವಸಾಯ ಕೈಕೊಟ್ಟಿತು. ಆದ್ದರಿಂದ ನಮಗೆ ತುಂಬಾ ನಷ್ಟವಾಯಿತು" ಎನ್ನುತ್ತಾಳೆ ಕಮಲಾಬಾಯಿ.

ಇತರೆ ಕೋಟ್ಯಂತರ ಜನರಂತೆ ಅವಳ ಕುಟುಂಬಕ್ಕೆ ಕೂಡ ಪೆಟ್ಟು ಬಿದ್ದದ್ದು ಇತ್ತೀಚಿನ ದಶಕಗಳಲ್ಲೇ ಅತ್ಯಂತ ತೀವ್ರವಾದ ಕೃಷಿ ಬಿಕ್ಕಟ್ಟಿನಿಂದಲೇ. ಹೆಚ್ಚುತ್ತಿರುವ ಹೂಡಿಕೆ ವೆಚ್ಚ, ಕುಸಿಯುತ್ತಿರುವ ಉತ್ಪನ್ನಗಳ ಬೆಲೆ, ಸಾಲ ಸಿಗದಿರುವುದು, ಸರ್ಕಾರದ ಬೆಂಬಲದ ಹಿಂದೆಗೆತ ಇವೆಲ್ಲವೂ ಇದಕ್ಕೆ ಕಾರಣವಾಯಿತು. ಹಳ್ಳಿಯಲ್ಲಿರುವ ಎಲ್ಲರಿಗೂ ಹೀಗೆಯೇ ಆಯಿತು. ಕಳೆದ ವರ್ಷವೂ 'ಬೆಳೆ ವಿಪತ್ತು' ಮುಂದುವರೆಯಿತು. ಮಗ ಭಾಸ್ಕರ 'ಬಿ.ಟಿ.ಹತ್ತಿ' (ಕೃತಕ ತಳಿ) ಹಾಕಿ ಅದೃಷ್ಟ ಪರೀಕ್ಷೆಗೆ ಮುಂದಾದ್ದರಿಂದ, ಆಕೆಗೆ ಅಗಾಧ ನಷ್ಟವಾಗಿ, ಸಿಕ್ಕಿದ್ದು ಕೇವಲ ಎರಡು ಕ್ವಿಂಟಲ್ ಹತ್ತಿ ಮಾತ್ರ.

ಇದೇ ಸಮಯದಲ್ಲಿ ಸರ್ಕಾರವು ಕಮಲಾಬಾಯಿಯ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಿತು. ಕಳೆದ ವರ್ಷದ ಕೊನೆಯಲ್ಲಿ 'ಪರಿಹಾರ ಯೋಜನೆ'ಯೊಂದರಲ್ಲಿ ಆಕೆ 'ಫಲಾನುಭವಿ'ಯಾದಳು. ಈ ಯೋಜನೆಯ ಅಡಿಯಲ್ಲಿ, ಕಮಲಾಬಾಯಿಗೆ ಬೇಡವಾಗಿದ್ದ 'ಅರ್ಧ ಜರ್ಸಿ' ತಳಿಯ ಹಸುವನ್ನು ಕೊಳ್ಳಬೇಕಾಯಿತು. ಆ ಹಸುವೋ ತುಂಬಾ ದುಬಾರಿಯಾದುದು. ಆ ಹಸುವಿಗೆ ಸರ್ಕಾರ ಬಹಳಷ್ಟು ಸಹಾಯಧನ ನೀಡಿದ್ದರೂ ಆಕೆ ತನ್ನ ಪಾಲಿನ ಹಣ ೫,೫೦೦/– ರೂ. ಅನ್ನೂ, ಅದಲ್ಲದೆ ಅದರ ಸಾಕಣೆಗೆ ಸಾಕಷ್ಟು ಖರ್ಚನ್ನೂ ಮಾಡಬೇಕಾಯಿತು. "ಈ ದರಿದ್ರದ್ದು ನಾವೆಲ್ಲಾ ಸೇರಿ ತಿನ್ನುವುದಕ್ಕಿಂತ ಹೆಚ್ಚು ತಿನ್ನುತ್ತದೆ. ಆದರೆ ಹಾಲು ಮಾತ್ರ ಒಂದೇ ಚಟಾಕು" ಎಂದು ಕಮಲಾಬಾಯಿ ಗೋಳಿಡುತ್ತಾಳೆ.

"ಆವತ್ತಿನಿಂದ ಈ ಹಸುವನ್ನು ನಾನು ಎರಡು ಬಾರಿ ಮಾರಿಬಿಟ್ಟಿದ್ದೇನೆ. ಆದರೆ ಎರಡು ಬಾರಿಯೂ ಕೊಂಡವರು ಅದನ್ನು ವಾಪಸ್ಸು ತಂದುಬಿಟ್ಟಿದ್ದಾರೆ" ಎಂದು ಕಮಲಾಬಾಯಿ ನಿಟ್ಟುಸಿರು ಬಿಡುತ್ತಾಳೆ, "ನಾನು ಪುಕ್ಕಟ್ಟೆಯಾಗಿ ನೀಡಲು ಹೋದರೂ, 'ಅದನ್ನು ಸಾಕಲು ನಮ್ಮಿಂದಾಗದು' ಎಂದು ಯಾರೂ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಈಗ ಈ ಹಸುವನ್ನು ನೋಡಿಕೊಳ್ಳಲು ನಾನೇ ತಿಂಗಳಿಗೆ ೫೦ ರೂಪಾಯಿಗಳನ್ನು ಪಕ್ಕದ ಮನೆಯಾಕೆಗೆ ಒಂದು ರೀತಿಯ ಉಲ್ಟಾ ಬಾಡಿಗೆ ಪಾವತಿಸುತ್ತಿದ್ದೇನೆ." ಒಪ್ಪಂದವೇನೆಂದರೆ, ಅದು ಹಾಲಂತೂ ಕೊಡಬೇಕು, ಹಾಗೆ ಕೊಡಲಾರಂಭಿಸಿದಾಗ ಹಾಲಿನಲ್ಲಿ ಅರ್ಧಭಾಗ ನೆರೆಮನೆಯಾಕೆಗೆ. ಇದೆಲ್ಲ ಆಶಾವಾದಿ ಭವಿಷ್ಯಕ್ಕೆ ಸೇರಿದ್ದು. ಆದರೆ ಈಗಂತೂ ಯಾವ ಹಸು ಆಕೆಯ ಯೋಗಕ್ಷೇಮಕ್ಕಾಗಿ ಎಂದು ಸರಕಾರ ಭರವಸೆ ನೀಡಿತ್ತೋ ಆ ಹಸುವಿನ ಯೋಗಕ್ಷೇಮವನ್ನು ನೋಡಿಕೊಳ್ಳಲು ಕಮಲಾಬಾಯಿ ತನ್ನ ಪಾಲಿನ ದುಡ್ಡು ತೆರುತ್ತಿದ್ದಾಳೆ.


ಇಷ್ಟೆಲ್ಲಾ ಆದರೂ, ಅವಳ ಹುರುಪು ಮತ್ತು ಉತ್ಸಾಹಗಳಿಗೆ ಇನ್ನೂ ಕುಂದುಂಟಾಗಿಲ್ಲ. ಬೇರೆಲ್ಲೂ ಕೆಲಸ ಸಿಗದಿದ್ದಾಗ ಆಕೆ ತನ್ನ ದೂರದ ಹೊಲಕ್ಕೆ ನಡೆದೇ ಹೋಗುತ್ತಾಳೆ. ಇಂದು ಆ ಜಾಡಿನಲ್ಲಿ ಅವಳೊಡನೆ ಇರುವ ಅವಳ ಉಲ್ಲಾಸಭರಿತ ಪುಟ್ಟ ಮೊಮ್ಮಕ್ಕಳದ್ದೇ ಒಂದು ಸಣ್ಣ ತಮಾಷೆಯ ನೋಟ. ಅವರ ಬದುಕು ಮತ್ತು ಭವಿಷ್ಯಗಳೇ ಅವಳಿಗೆ ಈಗ ಇರುವ ದೊಡ್ಡ ಸ್ಫೂರ್ತಿ. ಎಂದಿನಂತೆ ಆಕೆ ತಲೆಯೆತ್ತಿ ನಡೆಯುತ್ತಿದ್ದಾಳಾದರೂ ಆ ಪುಟ್ಟ ಮೊಮ್ಮಕ್ಕಳನ್ನು ನೋಡುವಾಗ ಒತ್ತರಿಸಿ ಬರುವ ಕಣ್ಣೀರನ್ನು ತಡೆಯಲಾರಳು. **'ಆತ್ಮಹತ್ಯೆಗಳು ಸತ್ತವರ ಕುರಿತಾದ್ದಲ್ಲ'** ಎಂದು ಆಕೆ ನಿರ್ಧರಿಸಿದ್ದಾಳೆ. ಅದು ಬದುಕಿರುವವರ ಕುರಿತಾದದ್ದು. ಆ ಪುಟ್ಟ ಮಕ್ಕಳಿಗಾಗಿ ಸೈನಿಕರಂತೆ ಕಮಲಾಬಾಯಿ ಮುನ್ನಡೆದು ಜೀವನ ಸಾಗಿಸುತ್ತಿದ್ದಾಳೆ. ★

### ಪುಸ್ತಕ ಪರಿಚಯ

# ಪುಸ್ತಕಲೋಕ

(ಕೊಲ್ಕತಾದ 'ಅದ್ವೈತ ಆಶ್ರಮ' ಮತ್ತು 'ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್' ಇತ್ತೀಚೆಗೆ ಹೊರತಂದಿರುವ ಮಹತ್ವದ ಪುಸ್ತಕಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿ ಕೊಡಲಾಗಿದೆ.)

## UNDERSTANDING CONSCIOUSNESS-RECENT ADVANCES




**ಪ್ರಕಾಶಕರು: ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್**

**ಪುಟ: ೪೬೯; ಬೆಲೆ: ರೂ.೧೭೫/–**

೨೦೦೮ರ ಜನವರಿ ೧೮ ರಿಂದ ೨೦ರವರೆಗೆ ಕೊಲ್ಕತಾದ ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್ ಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನವಿದು.

ಪ್ರಜ್ಞೆಯ ಅನ್ವೇಷಣೆಯನ್ನು ೩ ವಿಧಗಳಲ್ಲಿ ಮಾಡುವುದು ಸಾಧ್ಯ: ೧. ತತ್ತ್ವಜ್ಞಾನಿಗಳು ಅನುಸರಿಸುವ ತಾರ್ಕಿಕ ಮಾರ್ಗ; ೨. ವಿಜ್ಞಾನಿಗಳು ಅನುಸರಿಸುವ ಪ್ರಾಯೋಗಿಕ ಮಾರ್ಗ; ೩. ಅನುಭಾವಿಗಳು ಅನುಸರಿಸುವ ಸ್ವಾನುಭವದ ಮಾರ್ಗ. ಈ ಮೂರೂ ವರ್ಗಕ್ಕೆ ಸೇರಿದ ತಜ್ಞರು ಮಂಡಿಸಿದ ಬರಹಗಳನ್ನು ಈ ಪುಸ್ತಕವು ಒಳಗೊಂಡಿದೆ.


ಹೆಚ್ಚಿನ ಜೀವವಿಜ್ಞಾನಿಗಳು ಪ್ರಜ್ಞೆಯನ್ನು, ಮಿದುಳಿನಲ್ಲಿ ನಡೆಯುವ ಒಂದು ಪ್ರಕ್ರಿಯೆಯೆಂದು ಪರಿಭಾವಿಸಿ, ಮಿದುಳಿನ ವ್ಯವಸ್ಥೆಯನ್ನು ಅಧ್ಯಯನ ಮಾಡುವುದರ ಮೂಲಕ ಪ್ರಜ್ಞೆಯ ಗುಣಲಕ್ಷಣಗಳನ್ನು ಅರಿಯಬಹುದು ಎನ್ನುತ್ತಾರೆ. ಪ್ರಜ್ಞೆಯ ವಿವಿಧ ಹಂತಗಳು ಮತ್ತು ಮನಸ್ಸಿನ ಹಂತಗಳ ನಡುವೆ ಸಂಬಂಧವಿರುವುದರಿಂದ, ಅವುಗಳಿಗೆ ಕಾರಣವಾದ ನ್ಯೂರಾನುಗಳ ವಿದ್ಯುತ್–ಸಂಬಂಧಿತ ಕ್ರಿಯೆಗಳ ಅಧ್ಯಯನವನ್ನು ಕೆಲವು ವಿಜ್ಞಾನಿಗಳು ಮಾಡುತ್ತಾರೆ. ಜೀವಕೋಶಗಳ ಕಾರ್ಯಗಳಿಗೆ ಕಾರಣವಾದ ಜೀನ್‌ಗಳು ಮತ್ತು ಅವುಗಳನ್ನು ಹೊಂದಿರುವ ಡಿ.ಎನ್.ಎ.ಗಳ ಅಧ್ಯಯನದ ಮೂಲಕ ಇನ್ನಿತರ ವಿಜ್ಞಾನಿಗಳು ಪ್ರಜ್ಞೆಯ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಪ್ರಜ್ಞೆಯು ಟೆಲಿಪತಿಯನ್ನು ಹೋಲುವುದನ್ನು ಕೆಲವು ವಿಜ್ಞಾನಿಗಳು ಗಮನಿಸಿದ್ದಾರೆ. ಪ್ರಜ್ಞೆಯ ಅನ್ವೇಷಣೆಯಲ್ಲಿ ವಿಜ್ಞಾನಿಗಳಿಗೆ ಕ್ವಾಂಟಂ ಸಿದ್ಧಾಂತದ ಮೂಲಕ ಅನಾವರಣಗೊಂಡ ಎರಡು ಸತ್ಯಗಳು ತಮ್ಮ ಪ್ರಭಾವವನ್ನು ಬೀರಿವೆ. ಒಂದು ಹೈಸನ್‌ಬರ್ಗ್‌ನ ಅನಿಶ್ಚಿತಾ ತತ್ತ್ವವು ಮಾನವನ ಜ್ಞಾನದ ಮೇಲೆ ಹೇರಿದ ಮಿತಿ. ಇನ್ನೊಂದು, ಪರಮಾಣುವಿನ ಒಳಜಗತ್ತಿನ ವಸ್ತುಜ್ಞಾನವನ್ನು ಅರಿಯುವಲ್ಲಿ ಮಾನವನ ಪ್ರಜ್ಞೆಯು ವಹಿಸುವ ಪಾತ್ರ.

ತತ್ತ್ವಜ್ಞಾನಿಗಳ ಪ್ರಕಾರ, ಮೂಲಭೂತ ಪ್ರಜ್ಞೆಯು ಜೀವ, ಮನಸ್ಸು ಮತ್ತು ವ್ಯಷ್ಟಿಪ್ರಜ್ಞೆಯಾಗಿ ಪ್ರಕಟವಾಗುವುದರಿಂದ, ಅವೆಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿದೆ. ಅನೇಕ ರಂಧ್ರಗಳಿರುವ ಮಣ್ಣಿನ ಮಡಕೆಯೊಂದರ ಒಳಗೆ ಉರಿಯುವ ದೀಪವಿದ್ದಾಗ, ವಿವಿಧ ರಂಧ್ರಗಳ ಮೂಲಕ ಬೆಳಕಿನ ಕಿರಣಗಳು ಹೊರಬರುವಂತೆ, ಅಂತರಂಗದಲ್ಲಿ ಜ್ಯೋತಿರೂಪದಲ್ಲಿರುವ ಪ್ರಜ್ಞೆಯು ಇಂದ್ರಿಯಗಳ ಮೂಲಕ ತನ್ನ ಬೆಳಕನ್ನು ಹೊರಚೆಲ್ಲುತ್ತದೆ ಎಂಬ ಶಂಕರಾಚಾರ್ಯರ ನಿದರ್ಶನ ಇಲ್ಲಿ ಪ್ರಸ್ತುತವಾಗುತ್ತದೆ. ಕೆಲವರ ಪ್ರಕಾರ, ಮೂಲಭೂತ ಪ್ರಜ್ಞೆಯು ಏನನ್ನೂ ಒಳಗೊಂಡಿರುವುದಿಲ್ಲ. ಆಳವಾದ ಚಿಂತನೆ, ಯೋಗ, ಧ್ಯಾನ, ವಿಪಶ್ಯನಗಳ ಮೂಲಕ ಮಾನವನು ತನ್ನ ಪ್ರಜ್ಞೆಯನ್ನು ಮೇಲ್ಮಟ್ಟಕ್ಕೆ ಏರಿಸಿಕೊಳ್ಳುವ ಸಾಧ್ಯತೆಯಿದೆ.

ಅನುಭಾವಿಗಳ ದೃಷ್ಟಿಯಿಂದ ನೋಡಿದಾಗ, ಪ್ರಜ್ಞೆಯು ಕೇವಲ ಅನುಭವ; ಅದನ್ನು ವಿವರಿಸುವುದು ಅಸಾಧ್ಯ. ತಾನು ಹೇಳುವುದು ಇತರರಿಗೆ ಅರ್ಥವಾಗದ್ದರಿಂದ, ಬೋಧಿವೃಕ್ಷದ ಕೆಳಗೆ ತಾನು ಪಡೆದ ದಿವ್ಯಪ್ರಜ್ಞೆಯನ್ನು ಕುರಿತು ಇತರರಿಗೆ ವಿವರಿಸುವುದಿಲ್ಲವೆಂದು ಗೌತಮ ಬುದ್ಧನು ನಿರ್ಧರಿಸಿದನು. ಆಗ ಪ್ರಜಾಪತಿಯು, ಉದಾಹರಣೆಗಳ ಮತ್ತು ಯಾವುದು ನಿಜವಾದ ಪ್ರಜ್ಞೆ ಅಲ್ಲವೆಂದು ಹೇಳುವುದರ ಮೂಲಕ ಉಪದೇಶವನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಇದಕ್ಕೆ ಸಮ್ಮತಿಸಿದ ಬುದ್ಧ ಸಾರಾನಾಥಕ್ಕೆ ಹೋಗಿ, ತನ್ನ ಪ್ರಥಮ ಉಪನ್ಯಾಸವಾದ 'ಧರ್ಮಚಕ್ರ ಪರಿವರ್ತನ ಸೂತ್ರ' ವನ್ನು ನೀಡಿದ. ಇಡೀ ವಿಶ್ವವು ಪ್ರಜ್ಞೆಯ ಸಾಗರದಲ್ಲಿ ಮುಳುಗಿದೆ ಎಂಬುದನ್ನು ಸಾಕ್ಷಾತ್ಕಾರ ಮಾಡಿಕೊಂಡ ಶ್ರೀರಾಮಕೃಷ್ಣರು, ದಿವ್ಯಪ್ರಜ್ಞೆಯ ಅನುಭವವು ವ್ಯಕ್ತಿನಿಷ್ಠವಾದ್ದರಿಂದ ಅದನ್ನು ಮಾತಿನ ಮೂಲಕ ವಿವರಿಸುವುದು ಅಸಾಧ್ಯ ಎಂಬುದನ್ನು ಹೀಗೆ ತಿಳಿಸುತ್ತಾರೆ: "ಎಂದೂ ತುಪ್ಪದ ರುಚಿನೋಡದವನಿಗೆ ತುಪ್ಪದ ರುಚಿಯನ್ನು ಹೇಗೆ ವಿವರಿಸುವುದು ಸಾಧ್ಯ? ತುಪ್ಪದ ರುಚಿ ತುಪ್ಪದಂತೆ ಮಾತ್ರ ಇದೆ ಎಂದು ಹೇಳುವುದು ಮಾತ್ರ ಸಾಧ್ಯ."

ಭೌತಿಕ, ಜೈವಿಕ, ಮತ್ತು ಮಾನಸಿಕ ವಾಸ್ತವಿಕತೆಗಳನ್ನು ಒಟ್ಟು ಸೇರಿಸಿ ಮಾಡುವ ಸಮಗ್ರ ಅಧ್ಯಯನವು ಪ್ರಜ್ಞೆಯ ವಿವಿಧ ಸ್ತರಗಳ ವಿವರಗಳನ್ನು ನೀಡುವುದರಿಂದ, ವಿಜ್ಞಾನ ಮತ್ತು ತತ್ತ್ವಜ್ಞಾನಗಳ ಸಂಗಮವಾಗುತ್ತದೆ; ಆ ಮೂಲಕ ಮೂಲಭೂತ ಪ್ರಜ್ಞೆ ಹೆಚ್ಚು ಸ್ಪಷ್ಟವಾಗುವುದು ಎಂಬುದು ಒಂದು ವಾದ. ಆದರೆ, ಅಖಂಡ ಚೈತನ್ಯವು ಮಾನವನ ಸೀಮಿತ ಮನಸ್ಸಿಗೆ ಸಿಲುಕದು ಎನ್ನುವುದು ಇನ್ನೊಂದು ವಾದ. ಆದರೆ ಸೋಲನ್ನು ಒಪ್ಪಿಕೊಳ್ಳದ ವೈಚಾರಿಕ ಮನೋಭಾವದ ಮಾನವ ತನ್ನ ಗುರಿ ತಲಪುವ ತನಕ ಅನ್ವೇಷಣೆಯನ್ನು ಮುಂದುವರಿಸುವುದನ್ನು ಬಿಡುವುದಿಲ್ಲ. ಈ ಅನ್ವೇಷಣೆಯ ವಿವಿಧ ಪ್ರಕಾರಗಳನ್ನು ಗುರುತಿಸುವುದೇ ಈ ಪುಸ್ತಕದ ತಿರುಳು.

## SUBJECTIVITY IN SCIENCE-
## Interpretations of the Cartesian Project




**ಲೇಖಕರು: ಕೃಷ್ಣಾ ರಾಯ್**

**ಪ್ರಕಾಶಕರು: ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್**

**ಪುಟ: ೨೪೩; ಬೆಲೆ: ರೂ.೧೦೦/–**

ಮೊದಲು ವಿಜ್ಞಾನಿಯಾಗಿದ್ದು ಬಳಿಕ ತತ್ತ್ವಜ್ಞಾನಿಯಾದ ಫ್ರಾನ್ಸಿನ ರೆನೆ ಡೆಕಾರ್ಟ್ (೧೫೯೬–೧೬೫೦) ನಿರ್ವಚಿಸಿದ, ಮನಸ್ಸು ಮತ್ತು ಬಾಹ್ಯವಸ್ತುಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ತತ್ತ್ವವು (Cogito, ergo sum -I think, therefore I am; ನಾನು ಆಲೋಚಿಸುತ್ತೇನೆ, ಹಾಗಾಗಿ ನಾನಿದ್ದೇನೆ), ಪಾಶ್ಚಾತ್ಯ ತತ್ತ್ವಜ್ಞಾನದ ಮೇಲೆ ಅಗಾಧ ಪ್ರಭಾವವನ್ನು ಬೀರಿದೆ. ನಮ್ಮ ಅಂತರಾತ್ಮದ ಕುರಿತು ನಾವು ತಿಳಿದಿರುವುದು ಹಾಗೂ ನಮ್ಮ